**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.**

**ಸಿಸಿ ನಂ.164/2015**

ಫಿರ್ಯಾದಿ: ಕರ್ನಾಟಕ ಸರಕಾರ ಪರ: ಸೇಡಂ ಪೊಲೀಸ್

-:: ವಿರುದ್ಧ ::-

ಆರೋಪಿತರು: 1. ಬಸವರಾಜ ತಂದೆ ರಾಮರೆಡ್ಡಿ ಧನರೆಡ್ಡಿ,
ವ: 60 ವರ್ಷ, ಉ: ಒಕ್ಕಲುತನ,
2. ರಮೇಶ ತಂದೆ ಬಸವರಾಜ ಧನರೆಡ್ಡಿ,
ವ: 35 ವರ್ಷ, ಉ: ಒಕ್ಕಲುತನ,
3. ಜನಾರ್ಧನರೆಡ್ಡಿ ತಂದೆ ಬಸವರಾಜ ಧನರೆಡ್ಡಿ,
ವ: 35 ವರ್ಷ, ಉ: ಒಕ್ಕಲುತನ,
ಎಲ್ಲರೂ ಸಾ: ಕೊಡ್ಲಾ ಗ್ರಾಮ, ತಾ: ಸೇಡಂ.

----

**ದೋ ಷಾ ರೋ ಪ ಣೆ**

ನಾನು ಶ್ರೀ ಮಹಾದೇವ ಕಾನಟ್ಟಿ, ಬಿಕಾಂ.ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 14-08-2014 ರಂದು ಮಧ್ಯಾಹ್ನ 1-00 ಗಂಟೆ ಸುಮಾರಿಗೆ ಸೇಡಂ ಠಾಣಾ ಹದ್ದಿಯಲ್ಲಿರುವ ಕೊಡ್ಲಾ ಗ್ರಾಮದ ಸೀಮಾಂತರದ ಫಿರ್ಯಾದಿ ಹೊಲ ಸರ್ವೆ ನಂ.643 ನೇದ್ದಕ್ಕೆ ಸಮಾನೋದ್ದೇಶದಿಂದ ಕೂಡಿಕೊಂಡು ಚಾಸಾ.1 ನೇದ್ದವರ ಹೊಲಕ್ಕೆ ಅತಿಕ್ರಮ ಪ್ರವೇಶ ಮಾಡಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. 447 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಸಮಾನೋದ್ದೇಶದಿಂದ ಕೂಡಿಕೊಂಡು ಚಾಸಾ.1 ನೇದ್ದವಳ ಹೊಲಕ್ಕೆ ಅತಿಕ್ರಮ ಪ್ರವೇಶ ಮಾಡಿ ಹೊಲದಲ್ಲಿನ ಬೆಳೆಗೆ ಕಳೆನಾಶಕ ಔಷಧ ಸಿಂಪಡಿಸಿ ಬೆಳೆಯನ್ನು ಹಾಳು ಮಾಡುತ್ತಿದ್ದಾಗ ಚಾಸಾ.1 ರವರು ವಿಚಾರಿಸಲಾಗಿ ಆಗ 1 ನೇ ಆರೋಪಿ ಚಾಸಾ.1 ನೇದ್ದವಳಿಗೆ ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಪಡಿಸಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. 427, 504 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.